**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 13.06.2025**

**ಪಾಟೀ ಸವಾಲುಃ ಶ್ರೀ ಸಿ ಬಿ ಸಿ ವಕೀಲರಿಂದ**

ನನ್ನ ಗಂಡ **25** ವರ್ಷದಿಂದ ಶುಂಟಿ ವ್ಯವಸಾಯ ಮಾಡುತ್ತಾರೆ. ಗಲಾಟೆಯಾದ ದಿನ ನನ್ನ ಗಂಡ ಅರಕಲಗೂಡಿನಲ್ಲಿ ಇದ್ದರು. ನಾನು ಅವರ ಜೊತೆಯಲ್ಲಿ ಇದ್ದೆ. ನನ್ನ ಗಂಡ ಎರಡು ದಿನಕ್ಕೊಮ್ಮೆ ಮನೆಗೆ ಬರುತ್ತಿದ್ದರು. ನನ್ನ ಮನೆಯಿುಂದ ಅರಕಲಗೂಡಿಗೆ **35** ಕಿ ಮಿ ದೂರವಿರುತ್ತದೆ . ಚಾಸಾ **1** ರವರು ಬೈಕಿನಲ್ಲಿ ಅರಕಲಗೂಡಿಗೆ ಹೋಗುತ್ತಿದ್ದರು . ಗಲಾಟೆಯಾದ ದಿನವೂ ಚಾಸಾ **1** ರವರು ಮನೆಗೆ ಬಂದಿರುತ್ತಾರೆ . ಚಾಸಾ **1** ರವರು ಮನೆಗೆ ಬರುಷ್ಟರಲ್ಲಿ ರಾತ್ರಿ **8.30** ಗಂಟೆ ಆಗಿತ್ತು. ಮನಗೆ ಬರುವಷರಲ್ಲಿ ಗೇಟಿನ ಬಳಿ ಗಲಾಟೇ ಆಗಿರುತ್ತದೆ. ಗಲಾಟೆಯಾಗುವ ಸಮಯದಲ್ಲಿ ನಾನು ಮನೆಯಲ್ಲಿದ್ದೆ. ನಾನು ಗಲಾಟೆಯಾಗುವುದನ್ನು ನೋಡಿರುವುದಿಲ್ಲ. ಗಲಾಟೆಯಾದ ದಿನ ನಾನು ನನ್ನ ಮಗ ಇಬ್ಬರೇ ಇದ್ದೆವು. ನನಗೆ ಗಲಾಟೆಯಾುದ ವಿಚಾರ ನನ್ನ ಗಂಡ ಕಿರುಚಿಕೊಂಡಾಗ ತಿಳಿದಿರುತ್ತದೆ. ಕಿರುಚಿದ ತಕ್ಷಣ ನಾನು ಮನೆಯ ಗೇಟಿನ ಬಳಿ ಹೋಗಿರುತ್ತೇನೆ. ಕಿರುಚಿದ ಶಬ್ದ ಕೇಳಿ ಬಂದ ಸಮಯದಲ್ಲಿ ನಾನು ಮನೆಯ ವರಾಂಡದಲ್ಲಿದ್ದೆ. ಮನೆಯ ವರಾಂಡ ಮತ್ತು ಗೇಟಿಗೂ ಸಮಾರು **10** ಮೀಟರ ಅಂತರ ಇರುತ್ತದೆ. ಚಾಸಾ **1** ರವರು ನನ್ನ ಹೆಸರು ಕರೆದು ಕಿರುಚಿಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನ ಮಗ ನನ್ನ ಜೊತೆಯಲ್ಲಿದ್ದ. ನನ್ನ ಮನೆಗೆ ಗಲಾಟೆಯಾದ ಸಮಯದಲ್ಲಿ ಸಿಸಿಟಿವಿ ಅಳವಡಿಸಿರುವುದಿಲ್ಲ. ಗೇಟಿಗೆ ಲೈಟನ್ನು ಹಾಕಿರುವುದಿಲ್ಲ. ಗೇಟಿನ ಬಳಿ ದಾರಿ ದೀಪ ಇರುತ್ತದೆ. ಗಲಾಟೆಯಾಗುವ ಮುಂಚೆ ದಾರಿ ದೀಪ ಗೇಟಿನ ಬಳಿ ಇತ್ತು. ಸುಮಾರು **50**

ಮೀ ಅಂತರದಲ್ಲಿ ಮನೆಗಳು ಇರುತ್ತವೆ. ನಮ್ಮ ಮನೆಯಿಂದ ಕರೆದರೆ ಅವರ ಅಕ್ಕಪಕ್ಕದ ಮನೆಗೂ ಕೇಳಿಸುತ್ತದೆ ಎಂದರೆ ಸರಿ. ಚಾಸಾ 1 ರವರು ಜೋರಾಗಿ ಕಿರುಚಿಕೊಂಡಿರುತ್ತಾರೆ. ಜೋರಾಗಿ ಕಿರುಚಿಕೊಂಡಾಗ ಅಕ್ಕಪಕ್ಕದವರಿಗೆ ಕಿರುಚಿದ ಶಬ್ದ ಕೇಳಿಸಿರುತ್ತದೆ. ಚಾಸಾ 1 ರವರು ಕಿರುಚಿಕೊಂಡು ಶಬ್ದ ಕೇಳಿ ನಾನು ಹೋದಾಗ ಅಕ್ಕಪಕ್ಕದವರಾರು ಬಂದಿರುವುದಿಲ್ಲ. ನಮ್ಮ ಮನೆಯ ಎದುರು ರಸ್ತೆ ಮುಂದೆ ಗ್ರಾಮಕ್ಕೂ ಹೋಗುವ ರಸ್ತೆ ಎಂದರೆ ಸರಿ. ಆ ರಸ್ತೆಯಲ್ಲಿ ಗ್ರಾಮಸ್ಥರು ಓಡಾಡುತ್ತಿರುತ್ತಾರೆ ಎಂದರೆ ಸರಿ. ನಾನು ಗಲಾಟೆ ಶಬ್ದ ಕೇಳಿ ಹೋದಾ ಸಮಯದಲ್ಲಿ ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರು ಬಂದಿರುವುದಿಲ್ಲ. ಆರೋಪಿಯ ಬಿಳಿ ಕಲರ್ ಸ್ಕೂಟಿ ತೆಗೆದುಕೊಂಡು ಹೋಗಿರುತ್ತಾನೆ. ನಾನು ಹೊರಗಡೆ ಬಂದು ನೋಡಿದಾಗ ಆರೋಪಿ ಕೈಯಲ್ಲಿ ಕಲ್ಲು ಇದ್ದು ಅವರು ಎಸೆದು ಹೊರಟು ಹೋಗಿರುತ್ತಾರೆ. ಅಲ್ಲಿ ಕಲ್ಲು ಗುಡ್ಡೆ ಮೇಲೆ ಆರೋಪಿಯು ಕಲ್ಲನ್ನು ಎಸೆದಿರುತ್ತಾರೆ . ಆರೋಪಿ ಹೊರಟು ಹೋದ ಸ್ಕೂಟಿಯ ನೋಂದಣಿ ಸಂಖ್ಯೆ ನನಗೆ ತಿಳಿದಿದೆ . ಆರೋಪಿಯು ಬೈಕಿನಿಂದ ಅವರ ಮನೆಗೆ ಹೋಗಿರುತ್ತಾರೆ . ಚಾಸ 1 ರವರು ಅವರು ಕೊಟ್ಟ ದೂರಿನಲ್ಲಿ ಆರೋಪಿ ಬಳಿ ಇದ್ದ ಸ್ಕೂಟಿ ನೋಂದಣಿ ಸಂಖ್ಯೆ ಹೇಳಿರುತ್ತಾರೆ. ಚಾಸಾ 1 ರವರು ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿ ಕಲ್ಲಿನಿಂದ ಹೊಡೆದರಾ ಅಥವಾ ಜಜ್ಜಿದರಾ ಎಂದು ಏನು ಹೇಳಿದರು ಎಂದರೆ ಸಾಕ್ಷಿಯು ಕಲ್ಲಿನಿಂದ ಹೊಡೆದರು ಎಂದು ನುಡಿದಿರುತ್ತಾರೆ . ಗುಡ್ಡೆಯಲ್ಲಿ ಬಿಸಾಡಿದ ಕಲ್ಲುಗಳಲ್ಲಿ ಇದೆ ಕಲ್ಲು ಎಂದು ನಾನು ಗುರುತು ಮಾಡಿಕೊಂಡಿರುವುದಿಲ್ಲ.

ಘಟನೆ ನಡೆದು ಮೂರು ದಿನದ ನಂತರ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ . ಕಲ್ಲನ್ನು ಪೋಲಿಸರು ವಶಕ್ಕೆ ಪಡೆದುಕೊಂಡರಾ ಅಥವಾ ಚಾಸಾ 1 ರವರು ತೆಗೆದುಕೊಟ್ಟರಾ ಎಂರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೋಲಿಸರು ಎಷ್ಟು ಜನ ಸ್ಥಳಕ್ಕೆ ಬಂದಿದ್ದರು ಎಂದರೆ ಸಾಕ್ಷಿಯು ಇಬ್ಬರು ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೋಲಿಸರು ಬಂದ ದಿನ ನಾನು ಮನೆಯಲ್ಲಿದ್ದೆ . ಕಲ್ಲಿನಿಂದ ಹೊಡೆದ ರಬಸಕ್ಕೆ ಚಾಸಾ 1 ರವರಿಗೆ ರಕ್ತಗಾಯವಾಗಿತ್ತು ಹಾಗೂ ಬಟ್ಟೆಗೆಲ್ಲಾ ಬಿದ್ದಿತ್ತು. ನೆಲದಲ್ಲಿ ರಕ್ತ ಚಿಮ್ಮಿತ್ತು . ಘಟನಾ ನಡೆದ ತಕ್ಷಣ ನಾನು ಆಸ್ಪತ್ರೆಗೆ ಚಾಸಾ 1 ರವರು ಕರೆದುಕೊಂಡು ಹೋಗಿರುತ್ತೇನೆ . ಚಾಸಾ 1 ರವರನ್ನು ನಾನು ನನ್ನ ಭಾವನ ಕಾರಿನಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ . ರಕ್ತ ಆಗಿರುವ ಬಟ್ಟೆಯಲ್ಲಿ ಚಾಸ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ . ನಾನು ನನ್ನ ಮತ್ತು ಮಗ ಮತ್ತು ಭಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ . ರಾತ್ರಿ 9.00 ಗಂಟೆ ಸಮಯಕ್ಕೆ ಕುಶಾಲನಗರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ .

ನಮ್ಮ ಮನೆಯಿುಂದ ಕುಶಾಲನಗರ ಸರಕಾರಿ ಆಸ್ಪತ್ರೆ 25 ಕಿ ಮಿ ಇರುತ್ತದೆ . ನಾನು ಆಸ್ಪತ್ರೆಗೆ ಹೋದಾಗ ವೈದ್ಯರೆಲ್ಲಾ ಅಲ್ಲೇ ಇದ್ದರು . ನನ್ನ ಗಂಡನಿಗೆ ಪ್ರಜ್ಞೆ ಇತ್ತು . ಅವರು ನಡೆದುಕೊಂಡು ಆಸ್ಪತ್ರೆಗೆ ಹೋಗಿರುತ್ತಾರೆ. ಆ ದಿನ ಪೋಲಿಸರಿಗೆ ಚಾಸಾ 1 ರವರು ಹೇಳಿದ ಮೇರೆಗೆ ನಾನು ಬರೆದು ದೂರನ್ನು ನೀಡಿರುತ್ತೇವೆ . ಆ ಸಮಯದಲ್ಲಿ ಪೋಲಿಸರು ಚಾಸಾ 1 ರವರು

ಹಾಕಿದ ಬಟ್ಟೆಯನ್ನು ವಶಪಡಿಸಿಕೊಂಡಿರುವುದಿಲ್ಲ. ಪೋಲಿಸರು ಚಾಸಾ 1 ರವರು ಧರಿಸಿದ ಬಟ್ಟೆಯನ್ನು ನೋಡಿರುತ್ತಾರೆ . ನಾನು ಪೋಲಿಸರಿಗೆ ಹೊಡೆದ ಗಾಯದಿಂದ ಬಂದ ರಕ್ತದ ಕಲೆ ಇದು ಎಂದು ಹೇಳಿರುತ್ತೇನೆ. ಚಾಸಾ 1 ರವರಿಗೆ ರಕ್ತ ಸೋರುತ್ತಿತ್ತು ಮತ್ತು ಸುಸ್ತಾಗಿದ್ದರು . ಆರೋಪಿಯ ಗಾಡಿ ನಂಬರನ್ನು ನಾನು ನನ್ನ ಬರವಣಿಗೆಯಲ್ಲಿ ಬರೆದಿರುತ್ತೇನೆ . ಘಟನಾ ಸಂಬಂಧ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ . ಚಾಸಾ 1 ರವರು ಎಷ್ಟು ಬಾರಿ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಚಾಸಾ 1 ರವರು ಹೇಳಿದ ಮೇರೆಗೆ ಕೊಟ್ಟ ದೂರನ್ನು ಹೊರತು ಪಡಿಸಿ ನಾನು ಯಾವುದೆ ಹೇಳಿಕೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನನ್ನ ಬರವಣಿಗೆಯಲ್ಲಿ ಬರೆದ ದೂರಿಗೆ ಚಾಸಾ 1 ರವರು ಸಹಿ ಹಾಕಿರುತ್ತಾರೆ . ಪೋಲಿಸರು ಘಟನಾ ಸ್ಥಳಕ್ಕೆ ಬಂದಾಗ ಆ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಿವಸ ನನ್ನ ಮಗ ಪೊಲೀಸ್ ಠಾಣೆಗೆ ಹೊೀಗಿರುವುದಿಲ್ಲ. ಚಾಸಾ 1 ರವರು ಬೇರೆ ಬೇರೆ ಕೇಸಿಗಳಲ್ಲಿ ನ್ಯಾಯಾಲಯಕ್ಕೆ ಬರುತ್ತಿರುತ್ತಾರೆ ಎಂದರೆ ಸರಿ . ಚಾಸಾ 1 ರವರ ಮೇಲೆ ಎರಡು ಮೂರು ಕೇಸುಗಳು ನ್ಯಾಯಾಲಯದ ಮುಂದೆ ನಡೆಯುತ್ತಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಒಂದು ಕೇಸಿನಲ್ಲಿ ಚಾಸಾ 1 ರವರು ರಾಜಿ ತೀರ್ಮಾನ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಆರೋಪಿ ಕುಟುಂಬಕ್ಕೂ ಮತ್ತು ನಮ್ಮ ಕುಟುಂಬಕ್ಕೂ ತುಂಬಾ ದಿನಗಳಿಂದ ಮಾತುಕತೆ ಇರುವುದಿಲ್ಲ ಎಂದರೆ ಸರಿ . ತುಂಬಾ ವರ್ಷಗಳಿಂದ ಆರೋಪಿ ಮತುತ ಚಾಸಾ 1 ರವರು ಗಲಾಟೆಯಾಗಿ ರಾಜಿ ತೀರ್ಮಾನ ಮಾಡಿಕೊಂಡಿರುತ್ತಾರೆ ಎಂದರೆ ಸರಿ .

ಗಲಾಟೆಯಾಗುವ ಸಮಯದ ಸ್ವಲ್ಪ ದಿನಗಳ ಹಿಂದೆ ಚಾಸಾ 1 ರವರು ಆರೋಪಿಯ ಜಮೀನು ಶುಂಟಿ ನೆಡಲು ಬೇಕು ಎಂದು ಬೇರೆಯವರ ಮುಖಾಂತರ ಕೇಳಿಸಿದ ವಿಚಾರ ನನಗೆ ಗೊತ್ತಿಲ್ಲ. ಆರೋಪಿಯು ಅವರ ಜಮೀನನ್ನು ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ಚಾಸಾ 1 ರವರು ಆರೋಪಿ ಜೊತೆ ಮನಸ್ತಾಪ ಉಂಟಾಗಿತ್ತು ಎಂದರೆ ನಾನು ಒಪ್ಪುವುದಿಲ್ಲ. ಈ ಕಾರಣಗಳಿಂದ ಚಾಸಾ 1 ರವರ ವಿರುದ್ದ ಸುಳ್ಳು ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ರವರು ಮದ್ಯಪಾನ ಮಾಡುತ್ತಾರೆ . ಆರೋಪಿ ಯಾವುದೆ ಗಲಾಟೆ ಮಾಡಿರುವುದಿಲ್ಲ ಹಾಗೂ ನನ್ನ ಗಂಡನನ್ನು ಆರೋಪಿಯು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ನೀಡುವ ಸಮಯದಲ್ಲಿ ನಮ್ಮ ಗಂಡನ ಬೈಕು ರಿಪೇರೆಯಾಗಿ ಗ್ಯಾರೇಜನಲ್ಲಿ ಸರಿ ಮಾಡಿಸಿರುತ್ತಾರೆ ಎಂದರೆ ಸರಿ. ಚಾಸಾ 1 ರವರು ಬಿದ್ದು ಗಾಯಗೊಂಡಿರುತ್ತಾರೆ ಆರೋಪಿಯು ಅವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಮದ್ಯಾಪಾನ ಮಾಡಿ ಬಿದ್ದ ಕಾರಣ ಆರೋಪಿಯ ಬೈಕ ನಂಬರನ್ನು ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಮನೆಯ ಬಳಿ ಬಂದಿರುವುದಿಲ್ಲ ಹಾಗೂ ಯಾವುದೆ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆದಕಾರಣ ಸುಳ್ಳು ದೂರಿಗೆ ಸಾಕ್ಷಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಹೇಳಿದ ಹಾಗೆ ನಾನು ಇವತ್ತು ನ್ಯಾಯಾಲಯ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ